

## ಚಾರ್ಲಿ ನಂತರ ಹಾರರ್, ಕಾಮಿಡಿ: ಕಿರಣ್‌ರಾಜ್

ತಮ್ಮ ಚೊಚ್ಚಲ ಸಿನಿಮಾದಲ್ಲಿಯೇ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡ ನಿರ್ದೇಶಕ ಕಿರಣ್‌ರಾಜ್, ಇದೀಗ ಮತ್ತೊಂದು ಉತ್ತಮ ಸಿನಿಮಾ ನೀಡುವ ತಯಾರಿಯಲ್ಲಿದ್ದಾರೆ. ಈ ಬಾರಿ ಹಾರರ್, ಕಾಮಿಡಿ ಹಾಗೂ ಸಾಹಸಪ್ರಧಾನ ಕಥೆಯುಳ್ಳ ಚಿತ್ರಕ್ಕೆ ಸಿದ್ಧತೆ ನಡೆಸುತ್ತಿರುವುದಾಗಿ ಹೇಳಿದ್ದಾರೆ.

ತಮ್ಮ ಮೊದಲ ಸಿನಿಮಾ '777 ಚಾರ್ಲಿ' ಮೂಲಕ ಜನಮನ ಗೆದ್ದಿದ್ದರು ಕಿರಣ್‌ರಾಜ್. ತಮ್ಮ ಈ ಮೊಟ್ಟಮೊದಲ ಪ್ರಯತ್ನದಲ್ಲಿಯೇ ಯಶಸ್ಸು ಗಳಿಸಿ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡರು ಕೂಡ. ಆ ಯಶಸ್ಸಿನ ಬೆನ್ನಲ್ಲೇ ಮತ್ತೊಂದು ಒಳ್ಳೆ ಸಿನಿಮಾ ನೀಡುವುದಾಗಿ ಹೇಳಿಕೊಂಡಿದ್ದಾರೆ.

ಕಳೆದ ಐದು ತಿಂಗಳಿನಿಂದಲೂ ಹೊಸ ಸಿನಿಮಾ ಕೆಲಸಗಳು ನಡೆಯುತ್ತಿದ್ದು, ತಮ್ಮ ಹಿಂದಿನ ಸಿನಿಮಾದಂತೆಯೇ ಹೊಸ ಕಥೆಯನ್ನು ಪರಿಚಯಿಸುವುದಾಗಿ ಭರವಸೆ ನೀಡಿದ್ದಾರೆ.

ಚಾರ್ಲಿ ಸಿನಿಮಾ ಯಶಸ್ಸಿನ ನಂತರ ಕಿರಣ್ ಅವರ ಎರಡನೇ ಸಿನಿಮಾ ಬಗ್ಗೆ ಸಾಕಷ್ಟು ನಿರೀಕ್ಷೆಗಳು ಹುಟ್ಟಿಕೊಂಡಿವೆ. ಆದರೆ ಆ ನಿರೀಕ್ಷೆಗಳನ್ನು ಸುಳ್ಳು ಮಾಡದೇ, ಸಾಟಿಯಿಲ್ಲದಂಥ ಅನುಭವವನ್ನು ಪ್ರೇಕ್ಷಕರಿಗೆ ನೀಡುವುದಾಗಿ ಕಿರಣ್ ಹೇಳುತ್ತಾರೆ.

'ಕನ್ನಡ ಸಿನಿಮಾರಂಗಕ್ಕೆ ಈ ಸಿನಿಮಾದ ದೃಶ್ಯಸರಣಿಗಳು ಹೊಸತೆನಿಸಲಿವೆ. ಸಿನಿಮಾ ಕಂಟೆಂಟ್ ಕೂಡ ತಾಜಾ ಹಾಗೂ ಅಪರೂಪದ್ದಾಗಿದೆ. ಹಾರರ್, ಕಾಮಿಡಿ, ಸಾಹಸ ಪ್ರಕಾರಗಳು ತಮ್ಮದೇ ರೀತಿಯಿಂದ ಪ್ರೇಕ್ಷಕರನ್ನು ಮೆಚ್ಚಿಸಲಿವೆ' ಎಂದಿದ್ದಾರೆ.

'ಈ ಸಿನಿಮಾ ಕಥೆಯನ್ನು ಬರೆಯುತ್ತಾ ಹೋದಂತೆ, ಅದರ ಅಡಿಪಾಯ ಇನ್ನಷ್ಟು ಗಟ್ಟಿಯಾಗುತ್ತಾ ಸಾಗಿತು. ಭಾವನೆಗಳೇ ನನ್ನ ಕಥಾವಸ್ತುವಿಗೆ ಶಕ್ತಿ. ಈ ಸಿನಿಮಾವನ್ನು ಮಲಯಾಳಂ ಹಾಗೂ ಕನ್ನಡ ಎರಡು ಭಾಷೆಯಲ್ಲೂ ಮಾಡುತ್ತಿದ್ದೇನೆ. ಎರಡು ಚಿತ್ರರಂಗದಿಂದಲೂ ದೊಡ್ಡ ನಟರು ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ' ಎಂದು ಕಿರಣ್‌ರಾಜ್ ಹೇಳಿದ್ದಾರೆ. ■

# ಡಿ–ಗ್ಲಾಮ್ ಲುಕ್‌ನಲ್ಲಿ ಚೈತ್ರಾ ಆಚಾರ್

90ರ ದಶಕದ ಕಥೆಯುಳ್ಳ ಸಿನಿಮಾದಲ್ಲಿ ನಟಿಸುತ್ತಿರುವ ನಟಿ ಚೈತ್ರಾ ಆಚಾರ್, 'ಡಿ ಗ್ಲಾಮ್' ಲುಕ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಶ್ರೀನಿಧಿ ಬೆಂಗಳೂರು ನಿರ್ದೇಶನದ ಸೈನ್ಸ್ ಫಿಕ್ಷನ್ ಥ್ರಿಲ್ಲರ್ ಚಿತ್ರ 'ಬ್ಲಿಂಕ್'ನಲ್ಲಿ ಚೈತ್ರಾ ನಟಿಸುತ್ತಿದ್ದು, ತೆರೆ ಮೇಲೆ ದಿಟ್ಟ ಹುಡುಗಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಸಿನಿಮಾದಲ್ಲಿ, ದೀಕ್ಷಿತ್ ಶೆಟ್ಟಿ ಜೊತೆ ಮುಖ್ಯ ಪಾತ್ರದಲ್ಲಿ ಚೈತ್ರಾ ಇರಲಿದ್ದು, ದೇವಿಕಾ ಅರಸ್ ಎಂಬ ಪಾತ್ರ ನಿರ್ವಹಿಸುತ್ತಿದ್ದಾರೆ.

'ಇದು 1990ರಲ್ಲಿನ ಕಥೆ. ಸಿನಿಮಾದಲ್ಲಿ ನಾನು ಸ್ವತಂತ್ರ ಹಾಗೂ ದಿಟ್ಟ ಹುಡುಗಿಯ ಪಾತ್ರ ಮಾಡುತ್ತಿದ್ದೇನೆ. ಬಟ್ಟೆ ಹೊಲಿಯುವ, ಸಮಾಜ ಸೇವೆಯಲ್ಲಿ ತೊಡಗಿರುವ ಹುಡುಗಿಯ ಪಾತ್ರವದು. ಇದರಲ್ಲಿ ನಾನು ಗ್ಲಾಮರಸ್ ಹೊರತಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ಗೋಪಾಲ್ ಕೃಷ್ಣ ದೇಶಪಾಂಡೆ ಪಾತ್ರದ ಜೊತೆಗೆ ನನ್ನ ಪಾತ್ರ ಕನೆಕ್ಟ್ ಆಗುತ್ತಾ ಹೋಗುತ್ತದೆ' ಎಂದು ತಮ್ಮ ಪಾತ್ರದ ವಿವರಣೆ ನೀಡುತ್ತಾರೆ ಚೈತ್ರಾ.

ಸದ್ಯ, 'ಹ್ಯಾಪಿ ಬರ್ತ್‌ಡೇ ಟು ಮಿ' ಚಿತ್ರದಲ್ಲಿ ಕೂಡ ಅವರು ನಟಿಸುತ್ತಿದ್ದಾರೆ. 'ಈ ಹಿಂದೆ ನಾನು ಪ್ರಯತ್ನಿಸಿರದ ಕಥಾವಸ್ತುವದು. ನನ್ನ ಪಾತ್ರ ತುಂಬಾ ಫನ್ನಿಯಾಗಿದೆ' ಎನ್ನುತ್ತಾರೆ.

ತಮ್ಮ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳುವುದರಲ್ಲೂ ಚೈತ್ರಾ ಚೂಸಿಯಾಗಿದ್ದಾರೆ. 'ನಾನು ಮಾಡುವ ಪಾತ್ರಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸುತ್ತೇನೆ. ನನ್ನ ಕ್ರಿಯಾಶೀಲತೆಯನ್ನು ಉಪಯೋಗಿಸಿಕೊಳ್ಳಲು ಅವಕಾಶ ನೀಡುವ ಬೇರೆ ಬೇರೆ ಧಾಟಿಯ ಪಾತ್ರಗಳಲ್ಲಿ ನನ್ನನ್ನು ನಾನು ನೋಡಲು ಬಯಸುತ್ತೇನೆ' ಎಂದು ಏಕತಾನತೆಯ ಪಾತ್ರಗಳಿಂದ ಹೊರಗುಳಿಯುವುದಾಗಿ ಹೇಳುತ್ತಾರೆ.

ಈಚೆಗಷ್ಟೆ, 'ಸಪ್ತಸಾಗರದಾಚೆ ಎಲ್ಲೋ' ಚಿತ್ರೀಕರಣ ಮುಗಿಸಿದ್ದಾರೆ ಚೈತ್ರಾ. 'ರಕ್ಷಿತ್ ಶೆಟ್ಟಿ, ರುಕ್ಮಿಣಿ ವಸಂತ್, ಹೇಮಂತ್ ಎಂ. ರಾವ್ ಅವರ ತಂಡದಲ್ಲಿ ಕೆಲಸ ಮಾಡಿದ್ದು ಅದ್ಭುತ ಅನುಭವ' ಎಂದು ಹೇಳಿಕೊಂಡಿದ್ದಾರೆ.

'ಬೆಂಗಳೂರು ಕ್ವೀನ್ಸ್' ಎಂಬ ವೆಬ್ ಸಿರೀಸ್ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟ ಚೈತ್ರಾ ಆಚಾರ್, ಮಹಿರ, ಗಿಲ್ಕಿ, ತಲೆದಂಡ, ಅಕಟಕಟ ಸಿನಿಮಾಗಳಲ್ಲಿ ನಟಿಸಿದ್ದಾರೆ. ನಟನೆ ಜೊತೆಗೆ ಹಿನ್ನೆಲೆ ಗಾಯಕಿಯೂ ಆಗಿದ್ದಾರೆ. ■

